ಈ ದಿನ ದಿನಾಂಕಃ 27-03-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ಹೆಚ್ ಎಂ ವಿ  ವಕೀಲರಿಂದಃ</u>**

ಮಲ್ಲೇಶಪ್ಪ ನಾಗಪ್ಪನವರ ವಿರುದ್ಧ  ಸರ್ವೆ ನಂಃ 40 ರ ಜಮೀನಿಗಾಗಿ ದಾವೆ ಸಲ್ಲಿಸಿರುತ್ತಾರೆ. ಸರ್ವೆ ನಂಃ 40 ಮೂಲತಃ 32 ಎಕರೆ ಇತ್ತು. ಸದರಿ ಜಮೀನಿನಲ್ಲಿ ಯಾರು ಯಾರು ಎಷ್ಟು ಎಕರೆ ಜಮೀನಿನಲ್ಲಿ ಅನುಭವದಲ್ಲಿರುತ್ತಾರೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಮಲ್ಲೇಶಪ್ಪನ ಜಮೀನಿನ ಚೆಕ್ಕುಬಂಧಿಯ ಒಳಗೆ ಯಾವುದೇ ಆಸ್ತಿ ಬರುವುದಿಲ್ಲ ಎಂದರೆ ಸರಿ . ಚೆಕ್ಕುಬಂಧಿಯ ಒಳಗಿನ ಎಷ್ಟು ವಿಸ್ತೀರ್ಣದಲ್ಲಿ ಅನುಭವದಲ್ಲಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಮ್ಮ ಸಮಕ್ಷಮ ದಾವಾ ಸ್ವತ್ತಿನ ಅಳತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸುಮಾರು 1 ವರ್ಷದ ಹಿಂದೆ ಅಳತೆ ಆಗಿರುತ್ತದೆ. ಅಳತೆ ಮಾಡಿದವರ ಹೆಸರು ಹಾಗೂ ವಿವರ ನನಗೆ ಗೊತ್ತಿಲ್ಲ. ಅಳತೆಯ ಸಮಯದಲ್ಲಿ ಯಾರು ಹಾಜರಿದ್ದರು ಎಂದು ನನಗೆ ಸ್ಪಷ್ಟವಾಗಿ  ಗೊತ್ತಿಲ್ಲ . ಸರ್ವೇಯರ್ ನಿಂದ ನೋಟೀಸ್ ಬಂದಿರುತ್ತದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಅಳತೆ ಮಾಡಿದಾಗ ಸಂಬಂಧಪಟ್ಟ ದಾಖಲೆಗಳ ಮೇಲೆ ನಾನು ಸಹಿ ಮಾಡಿರುವುದಿಲ್ಲ. ಹಾಗಾಗಿ ನಿಖರವಾಗಿ ಇಷ್ಟೇ ಅಳತೆ ವಿಸ್ತೀರ್ಣದಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಪ್ರಮಾಣ ಪತ್ರದಲ್ಲಿ ಒತ್ತುವರಿ ಆಗಿರುವ ಆಸ್ತಿಯ ವಿಸ್ತೀರ್ಣ ಬರೆಸಿರುತ್ತೇನೆ. ಸುಮಾರು 9 ಗುಂಟೆ ಇರಬಹುದು.

2. ಪ್ರತಿವಾದಿಗಳಿಗೆ ಯಾವ ರೀತಿ ಆಸ್ತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅವರು ಎಷ್ಟು ಆಸ್ತಿ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಳತೆ ಮಾಡುವಾಗ ಮಲ್ಲೇಶಪ್ಪರವರ ಆಸ್ತಿಯನ್ನು ಮಾತ್ರ ಅಳತೆ ಮಾಡಿರುತ್ತಾರೆ. ಅಪೀಲ್



ನಂಃ 436/2020-21 ರಲ್ಲಿ ನಾನು ಪಕ್ಷಗಾರನಾಗಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ 5ನೇ ಪ್ರತಿವಾದಿ ನಾನೇ ಎಂದರೆ ಸರಿ . ನಿಡಿ 1 ರಲ್ಲಿ ನಾನು ಖುದ್ದು ಹಾಜರಾಗಿರುತ್ತೇನೆಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ಪ್ರತಿವಾದಿಗಳು ನನಗೆ ಅಪೀಲ್ ನಂಃ 436/2020-21 ರಲ್ಲಿ ಬರುವಂತೆ ತಿಳಿಸಿರುತ್ತಾರೆ. ಡಿಡಿಎಲ್ ಆರ್ ಕಚೇರಿಯಿಂದ ಸದರಿ ಪ್ರಕರಣದ ನೋಟೀಸ್ ಬಂದಿರುವ ವಿಚಾರ ನನಗೆ ನೆನಪಿರುವುದಿಲ್ಲ. ಅಪೀಲನ್ನು ಯಾವ ಕಾರಣಕ್ಕಾಗಿ ಸಲ್ಲಿಸಲಾಗಿರುತ್ತದೆ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಸದರಿ ಅಪೀಲಿನಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಯಾಕೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಃ 40 ರ ಚಿಕ್ಕಬೆನ್ನೂರು ಗ್ರಾಮದಲ್ಲಿ ನನ್ನ 3 ಎಕರೆ ಜಮೀನು ಇರುತ್ತದೆ. 4 ಗುಂಟೆ ಜಮೀನು ಕಡಿಮೆ ಬರುತ್ತಿದೆ ಎಂದು ಅಪೀಲನ್ನು ಸಲ್ಲಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಃ 40 ರ ಒಟ್ಟು ಆಸ್ತಿಗಳನ್ನು ಅಳತೆ ಮಾಡಿದಾಗ ನಿರ್ದಿಷ್ಟ ಅನುಭವದಲ್ಲಿರುವುದು ತಿಳಿದು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಪೋಡು ರದ್ದಾಗುತ್ತದೆ ಎಂದು ವಾದಿ ಸಿವಿಲ್ ವ್ಯಾಜ್ಯ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದು ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ಸಿವಿಲ್ ವ್ಯಾಜ್ಯದ ಕಾರಣ ಅಪೀಲು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಡುಗಳು ರದ್ದಾದರೇ ಯಾರು ಎಷ್ಟು ವಿಸ್ತೀರ್ಣದಲ್ಲಿರುತ್ತಾರೆ ಎಂದು ತಿಳಿದಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಗಳ

ಆಸ್ತಿಯಲ್ಲಿ ಒತ್ತುವರಿ ಮಾಡದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿ ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಆಸ್ತಿಯನ್ನು ನನ್ನ ಸಮಕ್ಷಮ ಅಳತೆ ಮಾಡಿರುವುದಿಲ್ಲ ಎಂದರೆ ಸರಿ . ಹಾಗಾಗಿ ಪ್ರತಿವಾದಿಗಳು ದಾಖಲೆಗಳಲ್ಲಿ



ನಮೂದಾಗಿರುವ ವಿಸ್ತೀರ್ಣವನ್ನು ಹೊರತುಪಡಿಸಿ ಹೆಚ್ಚಿನ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿಗಳ ಆಸ್ತಿಯನ್ನು ನಾನು ನೋಡಿರುತ್ತೇನೆ. ಸದರಿ ವಿಸ್ತೀರ್ಣದ ಜಮೀನಿನಲ್ಲಿ 10-12 ವರ್ಷದ ಅಡಿಕೆ ತೋಟ ಇರುತ್ತದೆ ಎಂದರೆ ಸರಿ . ವಾದಿಗಳ ತೋಟದಲ್ಲೂ ಸಹ 5 ವರ್ಷದ ಅಡಿಕೆ ಮರಗಳಿರುತ್ತವೆ.

**ಮರುವಿಚಾರಣೆ ಇರುವುದಿಲ್ಲ .**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.